**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು**

**ಸಿಸಿ ನಂ . 2767/2022**

ಫಿರ್ಯಾದುದಾರರು : ಶ್ರೀ ಎ.ಸಿ.ರವಿಕುಮಾರ್ ಬಿನ್ ಲೇಟ್ ಚಿಕ್ಕಣ್ಣ,
ವಯಸ್ಸು ಸುಮಾರು 50 ವರ್ಷ, ಕ್ಲಾಸ್.1
ಕನ್ಟ್ರಾಕ್ಟರ್, ವಾಸಃ ಆದಿಗೆರೆ ಗ್ರಾಮ,
ಹಿರೇನಲ್ಲೂರು ಹೋಬಳಿ,ಕಡೂರು ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

ವಿರುದ್ದ

ಆರೋಪಿ : ಶ್ರೀಮತಿ ಮಮತ ಎಲ್.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ರೀತ್ಯಾ ದಾಖಲಿಸಿಕೊಂಡ ಆರೋಪಿಗಳ ಹೇಳಿಕೆ**

| | | |
|---|---|---|
| ಆರೋಪಿಯ ಹೆಸರು | : | ಶ್ರೀಮತಿ ಮಮತ ಎಲ್. |
| ತಂದೆಯ ಹೆಸರು | : | ಲಿಂಗರಾಜು |
| ವಯಸ್ಸು | : | 39 ವರ್ಷ |
| ಕೆಲಸ | : | ಶಿಕ್ಷಕಿ |
| ವಾಸ | : | ಶ್ರೀಮತಿ ಮಮತ ಎಲ್. ಬಿನ್ ಲಿಂಗರಾಜು, ವಯಸ್ಸು ಸುಮಾರು 38 ವರ್ಷ, ಶಿಕ್ಷಕಿ, ವಾಸಃ ವಾರ್ಡ್ ನಂ.39, 2 ನೇ ಕ್ರಾಸ್, ಡೋರ್ ನಂ.50, ಜ್ಯೋತಿ ನಗರ, ಮೈಸೂರು, ಕೆಲಸ ಶಿಕ್ಷಕಿ, ಕನ್ನಿಕಾ ಕಾವೇರಿ ವಿದ್ಯಾ ಸಂಸ್ಥೆ (ರಿ), ಪ್ರೈಮರಿ ಸ್ಕೂಲ್ ಸೆಕ್ಷನ್, ಹೆಬ್ಬಾಳ, ಫಸ್ಟ್ ಸ್ಟೇಜ್, ಮೈಸೂರು. |

ಪ್ರಶ್ನೆ -1 ಪಿರ್ಯಾದುದಾರರಾದ ಶ್ರೀ ಎ.ಸಿ.ರವಿಕುಮಾರ್ ಅವರು ಏನು ಸಾಕ್ಷ್ಯ ನೀಡಿರುತ್ತಾರೆ ಎಂದು ನೀವು ತಿಳಿದುಕೊಂಡಿರುತ್ತೀರಾ?

**ಆರೋಪಿಯ ಉತ್ತರಃ**

**ಪ್ರಶ್ನೆ -2.** ಫ್ರಾಸಾ 1 ಶ್ರೀ ಎ.ಸಿ.ರವಿಕುಮಾರ್ ಇವರು ತಮ್ಮ ನುಡಿ ಸಾಕ್ಷ್ಯಕ್ಕೆ ಬದಲಾಗಿ ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಆರೋಪಿತರಾದ ನೀವು ಮತ್ತು ಪಿರ್ಯಾದುದಾರರು ಪರಿಚಯಸ್ಥರಾಗಿರುತ್ತೀರಿ ಎಂದು ಹೇಳಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಆರೋಪಿಯ ಉತ್ತರಃ**

**ಪ್ರಶ್ನೆ-3.** ಫ್ರಾಸಾ 1 ರವರು ಮುಂದುವರೆದು ತಮ್ಮ ಪ್ರಮಾಣ ಪತ್ರದಲ್ಲಿ, ಆರೋಪಿಯಾದ ನೀವು ಪಿರ್ಯಾದುದಾರರಿಂದ ನಿಮ್ಮ ಕುಟುಂಬದ ಆರ್ಥಿಕ ನೆರವಿಗಾಗಿ ದಿನಾಂಕ 29.03.2022 ರಂದು ರೂ.5,00,000/- (ಐದು ಲಕ್ಷ ರೂಪಾಯಿಗಳು) ಹಣವನ್ನು ಮರುಪಾವತಿಸುತ್ತೇನೆ ಎಂದು ಹೇಳಿ ಹಣವನ್ನು ಪಡೆದಿರುತ್ತೀರಿ ಎಂದು ಹೇಳಿರುತ್ತಾರೆ. ಇದಕ್ಕೆ ನಿಮ್ಮ ಉತ್ತ್ರರವೇನು?

**ಆರೋಪಿಯ ಉತ್ತರಃ**

**ಪ್ರಶ್ನೆ-4.** ಫ್ರಾಸಾ 1 ರವರು ಮುಂದುವರೆದು ತಮ್ಮ ಪ್ರಮಾಣ ಪತ್ರದಲ್ಲಿ, ಆರೋಪಿಯಾದ ನೀವು ಪಿರ್ಯಾದುದಾರರಿಂದ ನಿಮ್ಮ ಕುಟುಂಬದ ಆರ್ಥಿಕ ನೆರವಿಗಾಗಿ ದಿನಾಂಕ 29.04.2022 ರಂದು ರೂ.4,50,000/- (ನಾಲ್ಕು ಲಕ್ಷದ ಐವತ್ತು ಸಾವಿರ ರೂಪಾಯಿಗಳು) ಹಣವನ್ನು ಮರುಪಾವತಿಸುತ್ತೇನೆ ಎಂದು ಹೇಳಿ ಹಣವನ್ನು ಪಡೆದಿರುತ್ತೀರಿ ಎಂದು ಹೇಳಿರುತ್ತಾರೆ. ಇದಕ್ಕೆ ನಿಮ್ಮ ಉತ್ತ್ರರವೇನು?

**ಆರೋಪಿಯ ಉತ್ತರಃ**

**ಪ್ರಶ್ನೆ-4.** ಫ್ರಾಸಾ 1 ರವರು ಮುಂದುವರೆದು ತಮ್ಮ ಪ್ರಮಾಣ ಪತ್ರದಲ್ಲಿ, ಆದರೆ ಸದರಿ ಹಣವನ್ನು ಮರುಪಾವತಿಸಿರುವುದಿಲ್ಲ ಎಂದು ಹೇಳಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಆರೋಪಿಯ ಉತ್ತರಃ**

**ಪ್ರಶ್ನೆ-5.** ಪ್ರಾಸಾ 1 ರವರು ಮುಂದುವರೆದು ತಮ್ಮ ಪ್ರಮಾಣ ಪತ್ರದಲ್ಲಿ, ಫಿರ್ಯಾದುದಾರರು ಹಣವನ್ನು ಮರುಪಾವತಿಸುವಂತೆ ಕೇಳಿದಾಗ, ಸದರಿ ಹಣದ ಮರುಪಾವತಿಗಾಗಿ ನಿಮ್ಮ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹೆಬ್ಬಾಳ, ಮೈಸೂರು ಶಾಖೆಗೆ ಸೇರಿದ ಚೆಕ್ ಸಂಖ್ಯೆ 329562, ದಿನಾಂಕಃ29.03.2022, ಸೇರಿದ ರೂ.5,00,000/- (ಒಂದು ಲಕ್ಷ ರೂಪಾಯಿಗಳು ಮಾತ್ರ) ಎಂದು ನಮೂದಿಸಿರುವ ಚೆಕ್ಕನ್ನು ನೀಡಿ, ದಿನಾಂಕ 29.04.2022 ರಂದು ಅಥವಾ ಆ ನಂತರ ನಗಧೀಕರಿಸಿಕೊಳ್ಳುವಂತೆ ತಿಳಿಸಿರುತ್ತೀರಿ ಎಂದು ಹೇಳಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಆರೋಪಿಯ ಉತ್ತರಃ**

**ಪ್ರಶ್ನೆ-6.** ಪ್ರಾಸಾ 1 ರವರು ಮುಂದುವರೆದು ತಮ್ಮ ಪ್ರಮಾಣ ಪತ್ರದಲ್ಲಿ, ಫಿರ್ಯಾದುದಾರರು ಹಣವನ್ನು ಮರುಪಾವತಿಸುವಂತೆ ಕೇಳಿದಾಗ, ಸದರಿ ಹಣದ ಮರುಪಾವತಿಗಾಗಿ ನಿಮ್ಮ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹೆಬ್ಬಾಳ, ಮೈಸೂರು ಶಾಖೆಗೆ ಸೇರಿದ ಚೆಕ್ ಸಂಖ್ಯೆ 329563, ದಿನಾಂಕಃ29.04.2022, ಸೇರಿದ ರೂ.4,50,000/- (ನಾಲ್ಕು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಎಂದು ನಮೂದಿಸಿರುವ ಚೆಕ್ಕನ್ನು ನೀಡಿ, ದಿನಾಂಕ 29.04.2022 ರಂದು ಅಥವಾ ಆ ನಂತರ ನಗಧೀಕರಿಸಿಕೊಳ್ಳುವಂತೆ ತಿಳಿಸಿರುತ್ತೀರಿ ಎಂದು ಹೇಳಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಆರೋಪಿಯ ಉತ್ತರಃ**

**ಪ್ರಶ್ನೆ-7.** ಪ್ರಾಸಾ 1 ರವರು ಮುಂದುವರೆದು ತಮ್ಮ ಪ್ರಮಾಣಪತ್ರದಲ್ಲಿ, ನಿಮ್ಮ ಮಾತಿನಂತೆ ಫಿರ್ಯಾದುದಾರರು ಐ.ಡಿ.ಎಫ್.ಸಿ. ಫಸ್ಟ್ ಬ್ಯಾಂಕ್ ಲಿಮಿಟೆಡ್, ಕಡೂರು ಶಾಖೆಗೆ ನಗಧೀಕರಣಕ್ಕಾಗಿ ಚೆಕ್ಕನ್ನು ಸಲ್ಲಿಸಲಾಗಿರುತ್ತದೆ ಎಂದು ಹೇಳಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಆರೋಪಿಯ ಉತ್ತರಃ**

**ಪ್ರಶ್ನೆ-8.** ಪ್ರಾಸಾ 1 ರವರು ತಮ್ಮ ಪ್ರಮಾಣಪತ್ರದಲ್ಲಿ, ಪಿರ್ಯಾದುದಾರರು ಬ್ಯಾಂಕಿಗೆ ಹಾಜರುಪಡಿಸಿದ ಚೆಕ್ಕು "Payment stopped by the drawer" ಎಂಬ ಹಿಂಬರಹದೊಂದಿಗೆ ದಿನಾಂಕ ....... ರಂದು ಸದರಿ ಚೆಕ್ಕು ಅಮಾನ್ಯಗೊಂಡಿರುತ್ತದೆ ಎಂದು ಹೇಳಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಆರೋಪಿಯ ಉತ್ತರಃ**

**ಪ್ರಶ್ನೆ-9.** ಪ್ರಾಸಾ 1 ರವರು ತಮ್ಮ ಪ್ರಮಾಣಪತ್ರದಲ್ಲಿ, ಸದರಿ ವಿಚಾರವಾಗಿ ಆಪಾದಿತರಾದ ನಿಮಗೆ ದಿನಾಂಕಃ 25.05.2022 ರಂದು ನೋಂದಾಯಿತ ಅಂಚೆ ಮೂಲಕ ನೋಟೀಸು ಕಳುಹಿಸಿದ್ದು, ಸದರಿ ನೋಟೀಸು ದಿನಾಂಕ 27.05.2022 ರಂದು ಜಾರಿಯಾಗಿರುತ್ತದೆ ಎಂದು ಹೇಳಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಆರೋಪಿಯ ಉತ್ತರಃ**

**ಪ್ರಶ್ನೆ-10.** ಪ್ರಾಸಾ 1 ರವರು ತಮ್ಮ ಪ್ರಮಾಣಪತ್ರದಲ್ಲಿ ನೋಟೀಸ್ ಜಾರಿಯಾದ ನಂತರವು ಸಹ ಚಕ್ಕುಗಳಲ್ಲಿ ನಮೂದಿಸಿದ ಹಣವನ್ನು ಮರುಪಾವತಿಸಲು ಮುಂದೆ ಬಂದಿರುವುದಿಲ್ಲ ಎಂದು ಹೇಳಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಆರೋಪಿಯ ಉತ್ತರಃ**

**ಪ್ರಶ್ನೆ-11.** ಪ್ರಾಸಾ 1 ರವರು ತಮ್ಮ ಪ್ರಮಾಣಪತ್ರದಲ್ಲಿ ನೀವು ಪಿರ್ಯಾದುದಾರರಿಂದ ಹಣ ಸ್ವೀಕರಿಸಿ ಸದರಿ ಹಣದ ಮರು ಪಾವತಿಗಾಗಿ ಚೆಕ್ಕಗಳನ್ನು ನೀಡಿದ್ದು, ಸದರಿ ಚೆಕ್ಕುಗಳಿಗೆ ಸರಿಯಾಗಿ ಸಹಿ ಮಾಡುವುದು ನಿಮ್ಮ ಕರ್ತವ್ಯ ಆಗಿದ್ದರೂ ಸಹ ಉದ್ದೇಶಪೂರ್ವಕವಾಗಿ ಆರೋಪಿಯಾದ ನೀವು

ಚಾಸಾ-1 ರವರಿಗೆ ಮೋಸ ಮಾಡುವ ಉದ್ದೇಶದಿಂದ ಸಹಿಯಲ್ಲಿ ವ್ಯತ್ಯಾಸ ಮಾಡಿ ಚೆಕ್ಕನ್ನು ಪಿರ್ಯಾದುದಾರರಿಗೆ ನೀಡಿರುತ್ತೀರಿ ಎಂದು ಹೇಳಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಆರೋಪಿಯ ಉತ್ತರಃ**

**ಪ್ರಶ್ನೆ-12.**ಪ್ರಾಸಾ 1 ರವರು ತಮ್ಮ ಪ್ರಮಾಣಪತ್ರದಲ್ಲಿ, ಆರೋಪಿಯಾದ ನೀವು ಕಲಂ 138 ವರ್ಗಾವಣೆ ಲಿಖಿತಗಳ ಅಧಿನಿಯಮ ಅಡಿಯಲ್ಲಿ ದಂಡನೀಯ ಅಪರಾಧವನ್ನು ಮಾಡಿರುತ್ತೀರಿ ಎಂದು ಹೇಳಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಆರೋಪಿಯ ಉತ್ತರಃ**

**ಪ್ರಶ್ನೆ-13.** ಪ್ರಾಸಾ 1 ರವರು ನೀವು ನೀಡಿದ ಚೆಕ್ಕುಗಳನ್ನು ನಿಪಿ-1 ಮತ್ತು ನಿಪಿ-2 ಎಂದು, ನಿಮ್ಮ ಸಹಿಗಳನ್ನು ನಿಪಿ-1(ಎ) ಮತ್ತು ನಿಪಿ-2(ಎ) ಎಂದು, ಬ್ಯಾಂಕ್ ನವರು ನೀಡಿರುವ ಹಿಂಬರಹವನ್ನು ನಿಪಿ-3 ಎಂದು, ನಿಮಗೆ ಕಳುಹಿಸಿದ ನೋಟೀಸಿನ ಕಛೇರಿ ಪ್ರತಿಯನ್ನು ನಿಪಿ-4 ಎಂದು, ಎರಡು ಅಂಚೆ ರಶೀದಿಗಳನ್ನು ನಿಪಿ-5 ಮತ್ತು ನಿಪಿ-6 ಎಂದು, ಅಂಚೆ ಸ್ವೀಕೃತಿಯನ್ನು ನಿಪಿ7 ಎಂದು, ದಿನಾಂಕಃ04.06.2022 ರಂದು ವಕೀಲರ ಮೂಲಕ ನೀಡಿರುವ ಪ್ರತ್ಯುತ್ತರವನ್ನು ನಿಪಿ-8 ಎಂದು ಗುರುತಿಸಿಕೊಂಡಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಆರೋಪಿಯ ಉತ್ತರಃ**

**ಪ್ರಶ್ನೆ-14.** ಮೊಕದ್ದಮೆಯಲ್ಲಿ ನಿಮ್ಮ ಪರ ಯಾರನ್ನಾದರೂ ಸಾಕ್ಷಿಗಳನ್ನಾಗಿ ವಿಚಾರಣೆ ಮಾಡುತ್ತೀರಾ?

**ಆರೋಪಿಯ ಉತ್ತರಃ**

**ಪ್ರಶ್ನೆ-15.** ಈ ಮೊಕದ್ದಮೆಯಲ್ಲಿ ನೀವು ಮತ್ತೇನಾದರೂ ಹೇಳುವುದಿದೆಯೇ?

**ಆರೋಪಿಯ ಉತ್ತರಃ**

(ದಿನಾಂಕಃ13.01.2023 ರಂದು ಮೇಲ್ಕಂಡ ಆರೋಪಿತರಗಳ ಹೇಳಿಕೆಗಳನ್ನು ನನ್ನ ಸಮಕ್ಷಮ ಪಡೆದುಕೊಂಡು ಮೇಲ್ಕಂಡ ಪ್ರಶ್ನೆಗಳಿಗೆ ಆರೋಪಿತಗಳು ತಮ್ಮ ಸ್ವ ಇಚ್ಚೆಯಿಂದ ಹೇಳಿಕೆ ಕೊಟ್ಟಿರುತ್ತಾರೆ ಎಂದು ನಾನು ದೃಢಪಡಿಸುತ್ತೇನೆ)

(ಹೆಚ್.ಪಿ. ಮೋಹನ್ ಕುಮಾರ್)
ಪ್ರಧಾನ ಸಿವಿಲ್ ?ನ್ಯಾಯಾಧೀಶರು ಮತ್ತು ಜೆಎಂಎಫ್ಸಿ,
ಕಡೂರು.